ಕರ್ನಾಟಕ ವಿಧಾನ ಸಭೆ

ಬುಧವಾರ ೧೪ನೇ ಸೆಪ್ಟೆಂಬರ್ ೧೯೫೩

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

ಶ್ರೀ ಡಿ. ಬಿ. ಚಂದ್ರೇಗೌಡರು (ಅಧ್ಯಕ್ಷರು) ಪೀಠವನ್ನು ಅಲಂಕರಿಸಿದರು.

ಮನವಿಗಳು

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮೊನ್ನೆಯ ದಿವಸ ಕಟ್ಟಡ ಕುಸಿದು ಬಿದ್ದ ಸ್ಥಳದಲ್ಲಿ ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ಅಲ್ಲಿ ಯಾವುದೇ ರೀತಿಯ ಚುರುಕುತನದಿಂದ ಕೆಲಸ ನಡೆಯುತ್ತಿಲ್ಲ. ಅಲ್ಲಿ ಬೇಕಾದ ಸೌಕರ್ಯಗಳನ್ನು ಸರ್ಕಾರದವರು ನಡೆಸುತ್ತಿಲ್ಲ. ಜನರು ಬಹಳ ತೊಂದರೆ ಪಡುತ್ತಿದ್ದಾರೆ. ನಾನು ಕೂಡ ನಿನ್ನೆಯ ದಿವಸ ಅಂದರೆ ರಾತ್ರಿ ೧೧-೦೦ ಗಂಟೆಯಲ್ಲಿ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಸಚಿವರಾದಂಥ ಶ್ರೀಮಾನ್ ರಘುಪತಿಯವರು ಅಲ್ಲಿಯೇ ಇದ್ದರು. ಹೇಮಾವತಿಯಿಂದ ಯಂತ್ರಗಳನ್ನು ತರಿಸುತ್ತಿದ್ದಾರೆಂದು ಗೊತ್ತಾಗಿದೆ. ಆದಷ್ಟು ಬೇಗ ಯಂತ್ರಗಳನ್ನು ತರಿಸಿ ಅಲ್ಲಿ ಆಪತ್ತಿಗೆ ಸಿಕ್ಕಿಹಾಕಿಕೊಂಡಿರುವವರನ್ನು ರಕ್ಷಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಇನ್ನೂ ಸುಮಾರು ೨೦-೩೦ ಜನರು ಸಿಕ್ಕಿಹಾಕಿಕೊಂಡಿದ್ದಾರೆಂದು ನನಗೆ ಪರದಿಯಾಗಿದೆ. ಅಲ್ಲಿ ಎಂ. ಇ. ಜಿ. ಯವರು ಬಹಳ ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಬಿಟ್ಟರೆ ಅಲ್ಲಿ ಬೇರೆ ಯಾರೂ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಅಲ್ಲಿ ಚುರುಕಾಗಿ ಕೆಲಸ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಲಿ ಮಾನ್ಯ ಮಂತ್ರಿಗಳಿಗೆ ಹೇಳೋಣ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಇಲಾಖೆಯ ಬಗ್ಗೆ ಮಾತನಾಡಲಿಕ್ಕೆ ನಿನ್ನೆಯ ದಿವಸ ಅವಕಾಶ ಕೊಡಲಿಲ್ಲ. ಈ ರೀತಿಯಾದರೆ ನಾವು ಇಲ್ಲಿಗೆ ಶಾಸಕರಾಗಿ ಏತಕ್ಕೆ ಬರಬೇಕು? ಪಟ್ಟಣಗಳಲ್ಲಿ ಜನರು ಬೀರು, ಬ್ರಾಂದಿ ಇತ್ಯಾದಿಗಳನ್ನು ಕುಡಿದು ಸತ್ತರೆ ಹಳ್ಳಿಗಾಡುಗಳಲ್ಲಿ ಹೆಂಡ ಮತ್ತು ಕಳ್ಳಬಟ್ಟಿಯನ್ನು ಕುಡಿದು ಸಾಯುತ್ತಾರೆ. ಅದನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಅದಕ್ಕೆ ತಾವು ಅವಕಾಶ ಕೊಡಲಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಕ್ವಾಶ್ಚಿನ್ಸ್ ಕೇಳುವುದಕ್ಕಾದರೂ ನಮಗೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಲಿ ತಮಗೆ ವಿಶಾಲ ಅವಕಾಶವನ್ನು ಮಾಡಿಕೊಡೋಣ.

ಶ್ರೀ ಎಂ. ಎಸ್. ಪಾಟೀಲ್.—ಸ್ವಾಮಿ ನೆನ್ನೆಯ ದಿವಸ ಈ ಇಲಾಖೆಯ ಬಗ್ಗೆ ಚರ್ಚೆ ಮಾಡುವಾಗ ಕೆಲವೇ ಜನ ಸದಸ್ಯರು ಎಲ್ಲಾ ಸಮಯವನ್ನು ಉಪಯೋಗಿಸಿಕೊಂಡಿದ್ದಾರೆ. ಆ ರೀತಿಯಾದರೆ ಬೇರೆ ಸದಸ್ಯರಿಗೆ ಅವಕಾಶ ದೊರೆಯುವುದಿಲ್ಲ. ಆದ್ದರಿಂದ ತಾವು ಸಮಯವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.